**ಸಾಕ್ಷಿಗೆ ದಿನಾಂಕ 25-08-2016 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ.ಜಿ.ಎಸ್. ವಕೀಲರಿಂದ**

(ಸಾಕ್ಷಿ ತನಗೆ ಕನ್ನಡ ಮತ್ತು ಇಂಗ್ಲಿಷ್ ಬರುವುದಿಲ್ಲವೆಂದು ಹೇಳುತ್ತಾ, ತೆಲುಗಿನಲ್ಲಿ ಮಾತನಾಡುತ್ತಿದ್ದು, ಕಾರಣ ನ್ಯಾಯಾಲಯದಲ್ಲಿ ಹಾಜರಿರುವ ಶ್ರೀ. ಎಂ.ಬಿ.ಆರ್ ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಲಾಗಿದೆ)

ನಾನು ಅರ್ಜಿಯಲ್ಲಿ 3ನೇ ಅರ್ಜಿದಾರನಿದ್ದು, 1 ಮತ್ತು 2ನೇ ಅರ್ಜಿದಾರರು ನನ್ನ ತಂದೆ ಮತ್ತು ತಾಯಿ ಇದ್ದು, ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರ.ವ. ವರದಿಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ದೋಷಾರೋಪಣಾ ಪತ್ರದ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.2 ಎಂದು, ಅಪಘಾತದ ಸ್ಥಳದ ಬಗ್ಗೆ ಇರುವ ಕಚ್ಚಾ ನಕಾಶೆಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.3 ಎಂದು, ಎಂ.ವಿ.ಐ. ವರದಿಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.4 ಎಂದು, ಪಿ.ಎಂ. ವರದಿಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು

ನಿ.ಪಿ.5 ಎಂದು, ನನ್ನ ಸಹೋದರ ಹೆಸರಿಗೆ ಇರುವ ಆಧಾರ್‌ಕಾರ್ಡ್‌ನ ನೋಟರಿ ಪ್ರತಿ, ಡಿ.ಎಲ್‌ನ ನೋಟರಿ ಪ್ರತಿ ಮತ್ತು ಪಾನ್ ಕಾರ್ಡ್‌ನ ನೋಟರಿ ಪ್ರತಿ ಹಾಗೂ ನಮ್ಮ ಕುಟುಂಬದ ಹೆಸರಿಗೆ ಇರುವ ಪಡಿತರ ಚೀಟಿಯ ನೋಟರಿ ಪ್ರತಿ ಮತ್ತು ನನ್ನ ತಾಯಿ ಮತ್ತು ನನ್ನ ಹೆಸರಿಗೆ ಇರುವ ಆಧಾರ್ ಕಾರ್ಡ್‌ನ ನೋಟರಿ ಪ್ರತಿ ಹಾಜರುಪಡಿಸಿದ್ದು (ಈ ಹಂತದಲ್ಲಿ ಸಾಕ್ಷಿ ಆ ದಾಖಲೆಗಳ ಮೂಲ ಪ್ರತಿ ಹಾಜರುಪಡಿಸಿದ್ದು ಅದನ್ನು ನೋಟರಿ ಪ್ರತಿಯೊಂದಿಗೆ ಪರಿಶೀಲಿಸಿ, ಸಾಕ್ಷಿಗೆ ಹಿಂದುರುಗಿಸಲಾಯಿತು.) ಅವುಗಳನ್ನು ಕ್ರಮವಾಗಿ ನಿ.ಪಿ.6 ರಿಂದ ನಿ.ಪಿ.11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಿ ಮುಖ್ಯವಿಚಾರಣೆ ಮುಂದೂಡಲಾಯಿತು).

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)

(ಓ. ಹೇ. ಕೇ. ಸ.ಇ)

3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.

**(ಸಾಕ್ಷಿದಾರಳು-ನು ಈದಿನ ನ್ಯಾಯಾಲಯಕ್ಕೆ ತೆರಳುವ ಗಾಡಿಯಲ್ಲಿ – ಊರುಗೋಲಿನ ಸಹಾಯದಿಂದ ತನ್ನ ಪತಿಯ- ಸಹೋದರನ ಸಹಾಯದೊಂದಿಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತಾಳೆ-ನೆ.)**